ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ

**ಸಿ.ಸಿ.ನಂ.523/2019**

ಅಸಾ:2 (ಚಾಸಾ-4)

| | |
|---|---|
| ಹೆಸರು | ಮಹೇಶ ಕುಂಚನೂರ |
| ತಂದೆಯ /ಗಂಡನ ಹೆಸರು | ಮಲ್ಲಪ್ಪ |
| ವಯಸ್ಸು | 45 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ತೇರದಾಳ |

ದಿನಾಂಕ 26-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರವರಿಂದ

ನನಗೆ ಚಾಸಾ- 1 ಮತ್ತು 5 ಅವರ ಪರಿಚಯ ಇಲ್ಲ .ಆರೋಪಿಯ ಪರಿಚಯ ಇಲ್ಲಾ . ನನಗೆ ಈ ಪ್ರಕರಣದ ಯಾವುದೇ ಮಾಹಿತಿ ಇರುವದಿಲ್ಲ. ಸುಮಾರು 03 ವರ್ಷಗಳ ಹಿಂದೆ ನಾನು ಕೆಲಸಕ್ಕೆ ಎಂದು ತೇರದಾಳದಲ್ಲಿರುವ ನಮ್ಮ ಹೊಲಕ್ಕೆ ಹೋಗುತ್ತಿದ್ದಾಗ ಪೋಲಿಸರು ಸಾಕ್ಷಿಗೆ ಎಂದು ಹೇಳಿ ಒಂದು ದಾಖಲೆಯ ಮೇಲೆ ನನ್ನ ಸಹಿ ಪಡೆದು ಪೋಟೋ ತೆಗೆದುಕೊಂಡಿರುತ್ತಾರೆ . ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ . ಪೋಟೋಗಳನ್ನು ಯಾವ ಕಾರಣಕ್ಕೆ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ . ಪೋಲಿಸರು ನನ್ನ ಸಮಕ್ಷಮ ಯಾವುದೇ ವಾಹನಗಳನ್ನು ಜಪ್ತಿ ಪಡಿಸಿಕೊಂಡಿರುವದಿಲ್ಲ .

ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಸದರಿ ದಾಖಲೆ ವಾಹನ ತಡೆ ಪಂಚನಾಮೆ ಇದ್ದು ಅದನ್ನು ನಿಪಿ- 4 ಎಂದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ- 4 ಎ ಎಂದು ಗುರುತಿಸಲಾಯಿತು . ಸಾಕ್ಷಿ ತಾನು ಇರುವ ಒಂದು ಪೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು .

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ವಿನಂತಿಸಿದ್ದರಿಂದ ಅನುಮತಿಸಲಾಯಿತು)

ಪಾಟೀಸವಾಲು: ಸಹಾಯಕ ಸರಕಾರಿ ಅಭಿಯೋಜಕರವರಿಂದ

ದಿನಾಂಕ 12-02-2019 ರಂದು ಮದ್ಯಾಹ್ನ 01-00 ರಿಂದ 01-30 ಗಂಟೆ ವ ವರೆಗೆ ತೇರದಾಳ ಪೋಲಿಸ ಠಾಣೆಯ ಅವರಣದಲ್ಲಿ ಪೋಲಿಸರು ನನ್ನ ಮತ್ತು ಚಾಸಾ-5 ರವರ ಸಮಕ್ಷಮ ನಿಪಿ-4 ರಂತೆ ವಾಹನ ಜಪ್ತಿ ಪಂಚನಾಮೆ ಮಾಡುವ ಮೂಲಕ ಕೆ ಎಸ್ ಆರ್ ಟಿ ಸಿ ಬಸ್ಸ ನಂಬರ ಕೆ ಎ-

29 ಎಫ್ 1049 ನ್ನು ಜಪ್ತಿ ಮಾಡಿಕೊಂಡು  ನಿಪಿ- 5 ರಂತೆ  ಫೋಟೋ ತೆಗೆದಿದ್ದಾರೆ ಎಂದರೆ ಸರಿಯಲ್ಲ . ನನಗೆ ನಿಪಿ- 4 ಮತ್ತು 5  ರಲ್ಲಿರುವ ಎಲ್ಲ ಸಂಗತಿಗಳು ತಿಳಿಸಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

ಪಾಟೀಸವಾಲುಃ ಆರೋಪಿ ಪರ ಶ್ರೀ.ಎಸ್ ವಿ ಎಸ್    ವಕೀಲರಿಂದ:- ಇಲ್ಲಾ .

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ. ದಂ., ಬನಹಟ್ಟಿ .